ಕಣಿವೆಯ ನೆಲದಲ್ಲಿ ಹಠಾತ್ ಪ್ರವಾಹವನ್ನು ಉಂಟುಮಾಡುತ್ತವೆ. ಬೇಸಿಗೆಯಲ್ಲಿ ಗಾಳಿಯ ಉಷ್ಣತೆಯು ಐವತ್ತೇಳು ಡಿಗ್ರಿಸೆಲ್ಸಿಯಸ್‌ನಷ್ಟು ಹೆಚ್ಚಾಗುತ್ತದೆ. ಇಲ್ಲಿನ ಅತಿಯಾದ ಉಷ್ಣತೆ ಜನರನ್ನು ಬಲಿತೆಗೆದುಕೊಂಡಿದೆ.

ಅಜಾಗರೂಕರಾಗಿ ಇರುವವರನ್ನು ಡೆತ್ ವ್ಯಾಲಿ ಕ್ಷಮಿಸುವುದಿಲ್ಲ. ಪ್ರಕೃತಿಯ ಹಿಂಸಾಚಾರಕ್ಕೆ ಡೆತ್‌ವ್ಯಾಲಿ ಉತ್ತಮ ಉದಾಹರಣೆ. ಬೃಹತ್ ಸ್ಫೋಟಗಳಿಗೆ ಕಾರಣವಾದ ಹಲವಾರು ಪ್ರಾಚೀನ ಜ್ವಾಲಾಮುಖಿಗಳ ಪುರಾವೆಗಳು ಅಲ್ಲಿವೆ. ಉಬೆಹಬೆ ಕ್ರೇಟರ್ ಸ್ಫೋಟ ನೆಲದಲ್ಲಿ ಸುಮಾರು ಒಂದು ಕಿಲೋಮೀಟರ್ ಅಗಲದ ದೊಡ್ಡ ರಂಧ್ರವನ್ನು ಉಂಟುಮಾಡಿತ್ತು. ನೆಲವನ್ನು ಅತ್ಯಂತ ಹಿಂಸಾತ್ಮಕವಾಗಿ ಮೇಲೆತ್ತಿ ಅಸಾಮಾನ್ಯ ಮತ್ತು ಸುಂದರವಾದ ಶಿಲಾರಚನೆಗಳನ್ನು ಪರಿಸರ ಸೃಷ್ಟಿಸಿದೆ. ಇಲ್ಲಿನ ಕೆಂಪು, ಕಂದು, ಬೂದು, ಹಳದಿ ಅಥವಾ ಕಪ್ಪುಬಂಡೆಯ ಪ್ರದೇಶಗಳು ಕೆಲವೊಮ್ಮೆ ಭಯಾನಕ ಆಕಾರಗಳನ್ನು ಸೃಷ್ಟಿಸಿ, ಬೃಹತ್ ಜೀವಿಗಳು ಹಿಂಸಾತ್ಮಕವಾಗಿ ಭೂಮಿಯನ್ನು ಮುರಿದು ತಿರುಚಿದಂತೆ ಕಾಣುತ್ತದೆ.

ಡೆತ್ ವ್ಯಾಲಿಯ ಕೆಲವು ಭಾಗಗಳಲ್ಲಿರುವ ಬಂಡೆಗಳ ಸಾಲುಗಳು, ಈ ಪ್ರದೇಶವು ಸಾವಿರಾರು ವರ್ಷಗಳ ಹಿಂದೆ ಸಮುದ್ರದ ಆಳದಲ್ಲಿತ್ತು ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಕಣಿವೆಯ ಬಹುಪಾಲು ಅತ್ಯಂತ ಒಣಗಿದ್ದು ಸಮತಟ್ಟಾಗಿದ್ದು, ಯುನೈಟೆಡ್ ಸ್ಟೇಟ್ಸ್‌ನ ಅತ್ಯಂತ ಒಣ ಸ್ಥಳವಿದಾಗಿದೆ. ಅಲ್ಲಿನ ಕೆಲವು ಪ್ರದೇಶಗಳಲ್ಲಿ ಉಪ್ಪನ್ನು ಹೊರತುಪಡಿಸಿ ಬೇರೇನೂ ಇಲ್ಲ. ಅಲ್ಲಿ ಏನೂ ಬೆಳೆಯುವುದೂ ಇಲ್ಲ, ಹಾಗೆಂದರೆ ಇಲ್ಲಿ ಏನೂ ಇಲ್ಲವೆಂದಲ್ಲ ಕಣಿವೆಯು ಜೀವಂತವಾಗಿದೆ. ಸ್ವಲ್ಪ ಮಳೆಯ ನಂತರ ಕಾಡು ಹೂವುಗಳು ಬೇಗನೆ ಬೆಳೆಯುತ್ತವೆ. ಕೆಲವು ಮರುಭೂಮಿ ಸಸ್ಯಗಳು ನೆಲದಲ್ಲಿ ಆಳವಾದ ನೀರನ್ನು ತಲುಪಲು ಹದಿನೆಂಟು ಮೀಟರ್‌ಗಿಂತಲೂ ಹೆಚ್ಚು ಆಳಕ್ಕೆ ಬೇರುಗಳನ್ನು ಇಳಿಸಬಹುದು. ಡೆತ್ ವ್ಯಾಲಿ ಅನೇಕ ರೀತಿಯ ಪಕ್ಷಿಗಳು, ಸಸ್ತನಿಗಳು, ಸರೀಸೃಪಗಳ ವಾಸಸ್ಥಾನ. ಮರುಭೂಮಿಯ ಜಾಕ್ರಾಬಿಟ್, ಮರುಭೂಮಿ ಆಮೆ, ಸೈಡ್ ವೈಂಡರ್ ರ್‍ಯಾಟೆಲ್‌ಸ್ನೇಕ್ ಎಂದು ಕರೆಯಲಾಗುವ ಉದ್ದವಾದ ಚೂಪಾದ ಹಲ್ಲುಗಳನ್ನು ಹೊಂದಿರುವ ಅತ್ಯಂತ ವಿಷಕಾರಿ ಹಾವುಗಳ ಆವಾಸಸ್ಥಾನವಾಗಿದೆ.

ಕ್ಯಾಲಿಫೋರ್ನಿಯಾದಲ್ಲಿ ಚಿನ್ನ ಪತ್ತೆಯಾದ ವರ್ಷದಲ್ಲಿ ಅಲ್ಲಿನ ಗಣಿಗಾರಿಕೆ ಪ್ರದೇಶಗಳಿಗೆ ದೇಶದ ಇತರ ಭಾಗಗಳಿಂದ ಸಾವಿರಾರು ಮಂದಿ ತಾ ಮುಂದು ನಾ ಮುಂದು ಎಂದು ಅವಸರದಲ್ಲಿ ಹೋಗತೊಡಗಿದ್ದ ಅನೇಕ ಗುಂಪುಗಳು ತಪ್ಪು ನಿರ್ಧಾರ ಕೈಗೊಂಡವು. 1849ರಲ್ಲಿ ಕ್ಯಾಲಿಫೋರ್ನಿಯಾದ ಚಿನ್ನದ ಹೊಲಗಳಿಗೆ ಶಾರ್ಟ್‌ಕಟ್ ಹುಡುಕುತ್ತಿರುವಾಗ ಇಂತಹ ಗುಂಪೊಂದು ಓಲ್ಡ್ ಸ್ಪ್ಯಾನಿಷ್ ಟ್ರಯಲ್ ಎಂಬ ಮಾರ್ಗದಲ್ಲಿ ಕ್ರಮಿಸಿ ಡಿಸೆಂಬರ್ ವೇಳೆಗೆ ಡೆತ್ ವ್ಯಾಲಿ ತಲುಪಿತು. ಬಿರು ಬಿಸಿಲಲ್ಲಿ ನೀರಿನ ಕೊರತೆ ಎದುರಾಯಿತು. ಕಣಿವೆಯ ಪಶ್ಚಿಮಕ್ಕೆ ಎತ್ತರದ ಪರ್ವತಗಳ ಮೂಲಕ ಬೇಗ ಹಾದು ಹೋಗಲು ಜನರಿಗೆ ಸಾಧ್ಯವಾಗದೆ, ಆಹಾರದ ಕೊರತೆಯಿಂದ ಬಳಲತೊಡಗಿದರು. ಉಳಿವಿಗಾಗಿ ತಮ್ಮ ಕೆಲಸದ ಪ್ರಾಣಿಗಳನ್ನೇ ಕೊಂದು ಕಣಿವೆಯಿಂದ ಹೊರ ನಡೆಯಲು ಪ್ರಾರಂಭಿಸಿದರು. ಆ ಗುಂಪಿನ ಮಹಿಳೆಯೊಬ್ಬಳು ಅತ್ಯಂತ ಬೇಸರದಿಂದ ಹೊರಟವಳು ಹಿಂತಿರುಗಿ ನೋಡುತ್ತಾ – 'ವಿದಾಯ, ಸಾವಿನ ಕಣಿವೆ' ಎಂದು ಉದ್ಗರಿಸಿದಳು. ಆ ಉದ್ಗಾರವೇ ಕಣಿವೆಗೆ ಬದಲಿಸಲಾಗದ ಹೆಸರಾಗಿ ನಿಂತಿತು.

ಡೆತ್ ವ್ಯಾಲಿಗೆ ಭೇಟಿಕೊಡುವ ಬಹುತೇಕರು ಅಲ್ಲಿನ ಸ್ಪ್ಯಾನಿಷ್ ಕಟ್ಟಡದ ವಿನ್ಯಾಸವುಳ್ಳ 'ಸ್ಕಾಟಿ ಕ್ಯಾಸೆಲ್' ಎಂಬಲ್ಲಿಗೆ ಭೇಟಿಕೊಡುತ್ತಾರೆ. ನೀರನ್ನು ಹೊಂದಿರುವ ಕಣಿವೆಯ ಪ್ರದೇಶವಾಗಿರುವ ಅಲ್ಲಿ ತೀವ್ರವಾದ ಶಾಖದಿಂದ ರಕ್ಷಣೆ ನೀಡಲು ಹೆಚ್ಚಿನ ದಪ್ಪ ಗೋಡೆಯನ್ನು ಹೊಂದಿರುವ ದೊಡ್ಡ ಕಟ್ಟಡ 1029ರಲ್ಲಿ ನಿರ್ಮಾಣಗೊಂಡಿದ್ದು ಅದನ್ನು ವಾಲ್ಟರ್ ಸ್ಕಾಟ್ ಎಂದು ಹೆಸರಿಸಲಾಗಿದೆ. ವಾಲ್ಟರ್ ಸ್ಕಾಟ್ ಚಿನ್ನದ ಗಣಿಗಾರನಾಗಿದ್ದ. ಆತ ತನ್ನ ಚಿನ್ನದ ಗಣಿಯಿಂದ ಮಾಡಿದ ಹಣದಿಂದ ಎಲ್ಲರಿಗೂ ಮನೆ ನಿರ್ಮಿಸುವುದಾಗಿ ನಂಬಿಸಿ ಎಲ್ಲರಿಂದ ಡೆತ್ ವ್ಯಾಲಿಯಲ್ಲಿ ಹಣಹೂಡಿಸಲು ಮುಂದಾದನು. ಹಾಗೆ ಹಣ ಹೂಡಿದವರಲ್ಲಿ ಇಲಿನಾಯ್ಸ್‌ನ ಚಿಕಾಗೋದ ಉದ್ಯಮಿ ಆಲ್ಬರ್ಟ್ ಜಾನ್ಸನ್ ಕೂಡ ಒಬ್ಬ. ಅಪ್ರಾಮಾಣಿಕ ಸ್ಕಾಟ್, ಆಲ್ಬಟ್‌ನನ್ನು ಡೆತ್ ವ್ಯಾಲಿಗೆ ಕರೆದೊಯ್ದಿದ್ದ. ಆಲ್ಬರ್ಟ್ ಹಿಂತಿರುಗಲೇ ಇಲ್ಲವಂತೆ. 19ನೇ ಶತಮಾನದ ಉತ್ತರಾರ್ಧ ಮತ್ತು 20ನೇ ಶತಮಾನದ ಆರಂಭದಲ್ಲಿ ಹಲವಾರು ಅಲ್ಪಾವಧಿಯ ಬೂಮ್ ಪಟ್ಟಣಗಳು ಚಿನ್ನದ ಗಣಿಗಾರಿಕೆ ಮಾಡಲು ಮುಂದಾದವು. ಗಣಿಗಾರಿಕೆಗೆ ಬೇಕಾದ ಏಕೈಕ ದೀರ್ಘಕಾಲೀನ ಲಾಭದಾಯಕ ಅದಿರು ಬೊರಾಕ್ಸ್ ಕಣಿವೆಯಿಂದ ಬೇರೆಡೆಗೆ ಸಾಗಿಸಲಾಯಿತಂತೆ. 1920ರ ಸುಮಾರಿಗೆ ಸ್ಟೌವ್ ಪೈಪ್ ವೆಲ್ಸ್ ಮತ್ತು ಫರ್ನೇಸ್ ಕ್ರೀಕ್ ಸುತ್ತಲೂ ರೆಸಾರ್ಟ್‌ಗಳನ್ನು ನಿರ್ಮಿಸಿ ಪ್ರವಾಸೋದ್ಯಮ ವಿಸ್ತರಿಸಲಾಯಿತು. 'ಡೆತ್ ವ್ಯಾಲಿ' ರಾಷ್ಟ್ರೀಯ ಸ್ಮಾರಕವನ್ನು 1933ರಲ್ಲಿ ನಿರ್ಮಿಸಿ ಉದ್ಯಾನವನ್ನು ಗಣನೀಯವಾಗಿ ವಿಸ್ತರಿಸಿ, 1994ರಲ್ಲಿ ರಾಷ್ಟ್ರೀಯ ಉದ್ಯಾನವೆಂದು ಘೋಷಿಸಲಾಯಿತು. ■





